ವಿಷಯ :– ಹಿಂದುಳಿದ ಗಡಿ ಪಟ್ಟಣ ಪ್ರದೇಶಗಳಲ್ಲಿ ವಸತಿ ಸೌಕರ್ಯ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 587 (900)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಕರ್ನಾಟಕ ಹಿಂದುಳಿದ ಗಡಿ ಪಟ್ಟಣ ಪ್ರದೇಶಗಳಲ್ಲಿ ವಸತಿ ಸೌಕರ್ಯ ನೀಡಲು ವಿಶೇಷವಾದ ಯೋಜನೆಯನ್ನು ಸರ್ಕಾರ ಸಿದ್ಧಪಡಿಸಿದೆಯೇ ?

2) ಅಂತಹ ವಿಶೇಷ ಯೋಜನೆಯಲ್ಲಿ ಮೈಸೂರು ಜಿಲ್ಲೆ ಚಾಮರಾಜನಗರಕ್ಕೆ 3000 ಮನೆಗಳನ್ನು ಟ್ಟಿಸಿಕೊಡಲಾಗುವುದೇ ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

1) ಕರ್ನಾಟಕ ಗೃಹ ಮಂಡಳಿಯು ಹಿಂದುಳಿದ ಗಡಿ ಪ್ರದೇಶಗಳಲ್ಲಿ ಈಗಾಗಲೇ ಸಾಕಷ್ಟು ಮನೆಗಳನ್ನು ಸಾಮಾನ್ಯ ವಸತಿ ಯೋಜನೆಯಡಿಯಲ್ಲಿ ನಿರ್ಮಿಸಿರುತ್ತದೆ.

2) ಚಾಮರಾಜನಗರದಲ್ಲಿ ಈಗಾಗಲೇ ಬೀಡಿ ಕಾರ್ಮಿಕರಿಗಾಗಿ ಒಟ್ಟು 425 ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ. ಇದಲ್ಲದೆ ಮಂಡಳಿಯು ತನ್ನ ಸಂಯುಕ್ತ ಯೋಜನೆಯಲ್ಲಿ ಹುಬ್ಳೋ ನೆರವಿನೊಂದಿಗೆ ಒಟ್ಟು 264 ಮನೆಗಳನ್ನು ನಿರ್ಮಿಸಿರುತ್ತದೆ. ಈ ರೀತಿ ಕಟ್ಟಿದ ಮನೆಗಳಲ್ಲಿ ಸಾಕಷ್ಟು ಬೇಡಿಕೆ ಇಲ್ಲದೆ ಆರ್ಥಿಕವಾಗಿ ಹಿಂದುಳಿದ ವರ್ಗದ ಮನೆಗಳಲ್ಲಿ ಒಟ್ಟು 34 ಮನೆಗಳು ಖಾಲಿ ಬಿದ್ದಿರುತ್ತವೆ.

ಚಾಮರಾಜನಗರದಲ್ಲಿ ದಿನಾಂಕ 25–1–90 ರಲ್ಲಿ ಬೇಡಿಕೆ ಸಮೀಕ್ಷೆ ನಡೆಸಿದ್ದು ಒಟ್ಟು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ 19 ಅರ್ಜಿಗಳು ಮಾತ್ರ ಬಂದಿರುತ್ತವೆ. ಇನ್ನು ಉಳಿದ ಶ್ರೇಣಿಗೆ ಬೇಡಿಕೆಯೇ ಇರುವುದಿಲ್ಲ. ಸಾಕಷ್ಟು ಬೇಡಿಕೆ ಬಂದಲ್ಲಿ ವಸತಿ ಯೋಜನೆಯನ್ನು ತೆಗೆದುಕೊಳ್ಳಲಾಗುವುದು.

ವಿಷಯ :– ಕುಟುಂಬ ಯೋಜನೆ ಕುರಿತು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 589 (902)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಯಶಸ್ವಿಯಾಗಲು ಕೈಗೊಂಡಿರುವ ಕ್ರಮಗಳೇನು?

ಆ) ಮುಖ್ಯಮಂತ್ರಿಗಳು ಸೇರಿದಂತೆ ಈಗ ಇರುವ ಮಂತ್ರಿ ಮಂಡಲದ ಎಲ್ಲಾ ಸದಸ್ಯರು ಕುಟುಂಬ ಯೋಜನೆಯನ್ನು ತತ್ವಶಃ ಪಾಲಿಸುತ್ತಿದ್ದಾರೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು) :–

ಅ) ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಯಶಸ್ವಿಯಾಗಲು ಕೈಗೊಂಡಿರುವ ಕ್ರಮಗಳೆಂದರೆ:

1) ಪುರುಷ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಒಳಪಡುವವರಿಗೆ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ರೂ. 50 ಪ್ರೋತ್ಸಾಹ ಧನವನ್ನು ಮತ್ತು ಮಹಿಳಾ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಒಳಗಾಗುವವರಿಗೆ ಹೆಚ್ಚುವರಿ ರೂ. 10 ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

2) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಮನವೊಲಿಸುವ ಇಲಾಖೆಯ ಮತ್ತು ಇಲಾಖೇತರ ಸಿಬ್ಬಂದಿಯವರಿಗೆ ಮತ್ತು ಸಾರ್ವಜನಿಕರಿಗೆ ಒಂದು ವರ್ಷದಲ್ಲಿ ಒಟ್ಟು ಕೇಸುಗಳಿಗೆ ಅನುಸಾರವಾಗಿ ಪ್ರತಿ ಕೇಸಿಗೆ ರೂ. 15 ರಿಂದ ರೂ. 60 ರ ವರೆಗೆ ಪ್ರೇರೇಪಣೆ ಧನವನ್ನು ನೀಡಲಾಗುವುದು.

3) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಒಳಪಡುವವರಿಗೆ ಆದ್ಯಷ್ಟ ಚೀಟಿ ನೀಡುವ ಸಲುವಾಗಿ ಪ್ರತಿ ಜಿಲ್ಲೆಗೆ ಪ್ರತಿ ತಿಂಗಳಿಗೆ ರೂ. 15,000 ಮೊಬಲಗನ್ನು ನೀಡಲಾಗುತ್ತಿದೆ.

4) ಎರಡು ಮಕ್ಕಳು ಅಥವಾ ಕಡಿಮೆ ಮಕ್ಕಳಿದ್ದು ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಒಳಪಡುವ ಸರ್ಕಾರಿ ನೌಕರರಿಗೆ ಒಂದು ವಿಶೇಷ ವೇತನ ಭತ್ಯೆ ನೀಡಲಾಗುತ್ತಿದೆ.